**ಎಸ್.ಎಫ್. ಯೋಗಪ್ಪನವರ್**

ಸ್ಮಶಾನದಲ್ಲಿ ಸುಮಾರು ಐದು ಐದೂವರೆ ಗಂಟೆಗೆ ಕಾರ್ಯ ಮುಗಿಯಿತು. ರಾಘವಾಚಾರ್ಯರು ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿಕೊಟ್ಟರು. ಬೆಂಕಿ ಭುಗಿಲ್ಲೆಂದು ಆಕಾಶ ಮುಟ್ಟಿತು. ಇದು ಇಷ್ಟೆಯೇ? ಎಂದು ಒಳಗೊಳಗೆ ಕರುಳು ಕಿತ್ತು ಹೋಗುವ ಹಾಗೆ ಮರುಗಿದೆ. ಕಣ್ಣೀರು ಯಾವ ಅರಿವಿನ ಹಂಗಿಗೂ ಒಳಗಾಗದೇ ನೀರು ಹರಿದಂತೆ ಹರಿದುಹೋಗುತ್ತಿತ್ತು. ನಿಂತ ನೆಲದ ಸುತ್ತಲೂ ಕಣ್ಣಾಡಿಸಿದೆ. ಒಡೆದ ಬಳೆಯ ಚೂರುಗಳು, ಸೀಮೆಎಣ್ಣೆಗಾಗಿ ಬಳಸಿದ ಒಂದು ನೆಗ್ಗಿದ ಚೆಂಬು, ಹರಿದ ಚಪ್ಪಲಿ, ಬೂದು ಬಣ್ಣಕ್ಕೆ ತಿರುಗಿದ ಕಪ್ಪು ಮಣ್ಣು, ಒಡೆದ ಪಣತಿಯ ಚೂರುಗಳು, ಹಡಗಿನ ಪಟಗಳು ಹರಿದು ನೆಲಕ್ಕೆ ಬಿದ್ದಂತಿರುವ ಹಳೆಯ ದಿನಪತ್ರಿಕೆಯ ಹಾಳೆಗಳು, ಜನರ ಓಡಾಟದ ಮಧ್ಯೆಯೇ ಅಲ್ಲಲ್ಲಿ ಮುಖ ತೂರಿಸಿ ಬೆಳೆದು ನಿಂತ ಜಾಲಿಯ ಕಂಟಿಗಳು, ಸುತ್ತಲೂ ಆವರಿಸಿ ಪಸರಿಸಿದ ಹೊಲಸಿನ ಕಾಟು, ಕಣ್ಣು ಕಿತ್ತಂತೆ ತೂತಾಗಿರುವ ಕಾಂಪೌಂಡ್ ಗೋಡೆಗಳು, ಅಲ್ಲಲ್ಲಿ ಹರಿದು ಚೆಂದಿಯಾಗಿ ಬಿದ್ದಿರುವ ಒಣಗಿದ ಹೂಗಳು, ಹೂಗಳ ಮಧ್ಯೆ ಜೀವ ಹಿಡಿದು ಎಳೆದಾಡುವ ದಾರದ ಎಳೆಗಳು, ಕತ್ತರಿಸಿ ಬಿದ್ದ ಸೈಕಲ್ ಟಯರಿನ ತುಕಡಿಗಳು, ಇವೆಲ್ಲವುಗಳ ಮಧ್ಯೆ ಸೈರನ್ ಹಾಕಿ ನುಗ್ಗಿಬರುವ ಹಂದಿಯ ಮರಿಗಳು, ಕಣ್ಣಿಗೆ ಬವಳಿ ಬಂದಂತಾಯ್ತು.

ಮೇಲ್ಗಡೆ ನಿಂತ ಮೋಡಗಳು ನಿಂತಂತೇ ನಿಂತಿದ್ದವು. ಅವು ಕಪ್ಪು ನಾವೆಗಳಂತಾಗಿದ್ದವು. ಅಗ್ನಿಯಿಂದ ಹೊರಟ ಹೊಗೆ, ಆ ಕಪ್ಪು ಮೋಡಗಳಲ್ಲಿ ಐಕ್ಯವಾದಂತೆನಿಸಿತ್ತು. ಅಗ್ನಿಯ ಹೊಗೆ ಗಟ್ಟಿಯಾದಂತೆ, ಅವುಗಳ ಮುಖಗಳು ಇನ್ನೂ ಕಪ್ಪಿಟ್ಟವು. ಕಪ್ಪುವಸ್ತ್ರ ಧರಿಸಿ ನಿಂತಾಗಿತ್ತು. ಆಕಾಶದ ತುಂಬ ದಟ್ಟಮೋಡಗಳು ಮತ್ತಷ್ಟು ಗುಂಪುಗರೆದವು. ಇವು ಬರಿ ಮೋಡಗಳೊ, ಹರಿದಾಡುವ ಜೀವಗಳೋ ತಿಳಿಯದಂತಾಯ್ತು. ಆಕಾಶದ ತುಂಬ ಕಡುಕಪ್ಪು ಪ್ರಾಣಿಗಳ ಓಡಾಟ. ಇವುಗಳ ಮಧ್ಯದ ಸೂರ್ಯ ತಳಸುಟ್ಟ ಮಡಿಕೆಯಂತಾಗಿದ್ದಾನೆ. ಎಲ್ಲವೂ ಅವನ ಮುಖಕ್ಕೇ ಅಡರುತ್ತಿವೆ. ಅವು ಸೂರ್ಯನ ಕೈಬೆರಳೊಳಗಿನ ಹೊಗೆಯೂ ಇರಬಹುದು! ಇಲ್ಲಿ ಎಲ್ಲವೂ ಸುಡುತ್ತಿದೆ. ಸುಟ್ಟು ಕರಕಲಾಗುತ್ತಿದೆ. ಒಟ್ಟಿದ ಕಟ್ಟಿಗೆಗಳಿಗೆ ಹತ್ತಿದ ಬೆಂಕಿ, ಕಟ್ಟಿಗೆಗಳನ್ನು, ಕಟ್ಟಿಗೆಗಳ ಮಧ್ಯದ ದೇಹವನ್ನು ಸುಟ್ಟು ಬೂದಿಗೆ ತಿರುಗಿಸುತ್ತಿದೆ. ಇಲ್ಲಿ ಎಲ್ಲವೂ ಕಪ್ಪಗಾಗಿದೆ.